**ಅಸಲು ದಾವಾ ಸಂಖ್ಯೆ: 1427/2014**

**ಪಿ.ಡಬ್ಲ್ಯೂ-2**

**ದಿಃ 17–02–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

(ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಮರಾಠಿ ಭಾಷೆ ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀ ಪಿ.ಎಸ್.ಪಿ. ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು, ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.300/– ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮನೆಯ ನಂಬರ 244/116 ಆಗಿರುತ್ತದೆ. ಚಂದ್ರಕಾಂತ ಮೋರೆ ಇವರ ಪರಿಚಯ ನಾನು ದಾಖಲೆಗೆ ಸಹಿ ಮಾಡಲು ಹೋದಾಗ ಆಗಿರುತ್ತದೆ. ಚಂದ್ರಕಾಂತ ಮೋರೆ ಇವರು ತಹಸಿಲ್ದಾರ ಗಲ್ಲಿಯಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 6–7 ವರ್ಷದ ಹಿಂದೆ ಚಂದ್ರಕಾಂತ ಮೋರೆ ಇವರು ತಹಸಿಲ್ದಾರ ಗಲ್ಲಿಯಲ್ಲಿ ಇರುತ್ತಾರೆ ಎಂದು ಗೊತ್ತಾಯಿತು. ಕಿಶನ್ ಇವರು ನನಗೆ ಸುಮಾರು 30 ವರ್ಷದಿಂದ ಪರಿಚಯ ಇರುತ್ತಾರೆ.

ನಾನು, ಕಿಶನ್ ಮತ್ತು ಚಂದ್ರಕಾಂತ ಮೋರೆ ಇವರು ಪುಲಬಾಗ ಗಲ್ಲಿಯ ಶಾಲೆಯಲ್ಲಿ 7ನೇ ತರಗತಿಯನ್ನು ಒಟ್ಟಿಗೆ ಓದಿದ್ದೇವೆ ಎಂದರೆ ಸರಿಯಲ್ಲ. ತಹಸಿಲ್ದಾರ (ಅಡ್ಡಹೆಸರು) ಇವರು ಈ ದಾವೆಯನ್ನು ಸಲ್ಲಿಸಿದ್ದಾರೆ. ಯಾವ ವಿಷಯಕ್ಕಾಗಿ ಮತ್ತು ದಾವೆಯಲ್ಲಿ ಏನು ಮಾಹಿತಿ ಹೇಳಲಾಗಿದೆ ಎಂಬ ಬಗ್ಗೆ ಓದಿ ನೋಡಿದ್ದೇನೆ. ಇಂಗ್ಲಿಷ ನನಗೆ ಪೂರ್ಣ ಪ್ರಮಾಣದಲ್ಲಿ ಓದಿ ಅರ್ಥಮಾಡಿಕೊಳ್ಳಲು ಬರುವುದಿಲ್ಲ ಎಂದರೆ ಸರಿ. ನಾನು ಇಂಗ್ಲಿಷನಲ್ಲಿ ನನ್ನ ಪ್ರಮಾಣ ಪತ್ರದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ನನ್ನ ಪ್ರಮಾಣ

ಪತ್ರದಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಸ್ವಲ್ಪಮಟ್ಟಿಗೆ ಗೊತ್ತಿದೆ. ನಾನು ಸಾಕ್ಷ್ಯ ನೀಡಲು ಬರುವ ಮುಂಚೆ ಕರಾರು ಪತ್ರವನ್ನು ಓದಿದ್ದೇನೆ. ದಿಃ06.01.2025 ರಂದು ಮೊದಲಬಾರಿಗೆ ನಾನು ಕರಾರು ಪತ್ರವನ್ನು ನೋಡಿದ್ದೇನೆ ಎಂದರೆ ಸರಿ.

ಪಾಟೀಲ ಕುಟುಂಬದ ಕೃಷಿ ಭೂಮಿಯು ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ, ಆದರೆ ತಹಸಿಲ್ದಾರ ಕುಟುಂಬದೊಂದಿಗೆ ವ್ಯವಹಾರ ಆದ ಆಸ್ತಿಯ ಬಗ್ಗೆ ಮಾತ್ರ ಗೊತ್ತಿರುತ್ತದೆ. ದಿಃ01.02.1994 ರ ಕರಾರು ಪತ್ರದಲ್ಲಿ ಚಂದ್ರಕಾಂತ ಮೋರೆ ಇವರ ಉಲ್ಲೇಖ ಇದೆ. ದಿಃ01.02.1994 ರ ಕರಾರು ಪತ್ರದಲ್ಲಿ ಯಾವ ಸಂದರ್ಭದಲ್ಲಿ ಚಂದ್ರಕಾಂತ ಮೋರೆ ಇವರ ಉಲ್ಲೇಖ ಇದೆಯಾ ಎಂದರೆ ಜಿಪಿಎ ಕೊಡುತ್ತೇನೆ ಎಂದು ಹೇಳಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ದಿಃ01.02.1994 ರಂದು ಜಿಪಿಎ ಮಾಡಿಕೊಟ್ಟಿದ್ದರು. ಸದರಿ ಜಿಪಿಎ ರಲ್ಲಿ ಸಾಕ್ಷಿಗಳು ಎಂದು ಯಾರು ಸಹಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಯಾರು ಯಾರಿಗೆ ಜಿಪಿಎ ಕೊಟ್ಟಿದ್ದಾರೆ ಎಂದು ಮಾಹಿತಿ ಇಲ್ಲ. ಜಿಪಿಎ ಗಾಗಿ ಬಾಂಡ್ ಪೇಪರನ್ನು ಯಾರು ಪಡೆದುಕೊಂಡಿದ್ದರು ಮತ್ತು ಎಷ್ಟು ರೂ.ಗಳ ಬಾಂಡ್ ಪೇಪರ ಪಡೆದುಕೊಂಡಿದ್ದರು ಎಂದರೆ ಗೊತ್ತಿಲ್ಲ. ಜಿಪಿಎಯನ್ನು ಯಾವ ನೋಟರಿಯ ಬಳಿ ನೋಟರಿ ಮಾಡಿಸಲಾಗಿತ್ತು ಎಂದರೆ ಗೊತ್ತಿಲ್ಲ. ಚಂದ್ರಕಾಂತ ಮೋರೆ ಇವರಿಗೆ ಜಿಪಿಎ ನೀಡಿರುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಾನು ಜಿಪಿಎ ಯನ್ನು ನೋಡಿಲ್ಲ.

ಕರಾರು ಪತ್ರವನ್ನು 10 ರೂ.ಗಳ ಎರಡು ಬಾಂಡ್ ಪೇಪರ್ ಮೇಲೆ ಬರೆಯಲಾಗಿದೆ. ಜ್ಯೋತಿಬಾ ಇವರ ಮಗ ಅಶೋಕ ಇವರು ಬಾಂಡ್ ಪೇಪರ್

ತಂದಿದ್ದರು. ಯಾರ ಕಡೆಯಿಂದ ತೆಗೆದುಕೊಂಡು ಬಂದರು ಎಂದು ಗೊತ್ತಿಲ್ಲ. ಬಾಂಡ್ ಖರೀದಿ ಮಾಡುವಾಗ ನಾನು ಇರಲಿಲ್ಲ. ಸಾಕ್ಷಿಯಾಗಿ ಸಹಿ ಮಾಡುವ ಮೊದಲು ನಾನು ಆಸ್ತಿಯ ಉತಾರೆ ನೋಡಿಲ್ಲ. ಬಾಂಡ್ ರೈಟರ್ ಗೆ ಪೇಪರ್ ಕೊಡುವ ಮುಂಚೆ ಯಾವ ಉತಾರನ್ನು ನೀಡಲಾಗಿತ್ತು ಎಂದರೆ 193/2 ನ ಉತಾರೆಯನ್ನು ನೀಡಲಾಗಿತ್ತು. ಯಾವ ವರ್ಷದ ಉತಾರೆಯನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ.

ಕರಾರು ಪತ್ರವನ್ನು ಬರೆಯುವ ಕಾಲಕ್ಕೆ ನಾನು ಉಪಸ್ಥಿತಿ ಇರಲಿಲ್ಲ. ಅಗ್ರಿಮೆಂಟನ್ನು ಓದಿ ಹೇಳುವಾಗ ನಾನು ಸ್ಥಳದಲ್ಲಿ ಇದ್ದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಬಾಲಪೆನ್ನಲ್ಲಿ ಬರೆದಿದ್ದಾರಾ ಅಥವಾ ಇಂಕ್ ಪೆನ್ನಲ್ಲಿ ಬರೆದಿದ್ದಾರಾ ಎಂದರೆ ಗೊತ್ತಿಲ್ಲ. ಎಷ್ಟು ಹಾಳೆಯ ಮೇಲೆ ಅಗ್ರಿಮೆಂಟ ಮಾಡಲಾಗಿದೆ ಎಂದರೆ 3 ಹಾಳೆಯಲ್ಲಿ ಅಗ್ರಿಮೆಂಟ ಮಾಡಲಾಗಿದೆ. ಜ್ಯೋತಿಬಾ ಪಾಟೀಲ ಇವರು ಮೊದಲಿಗೆ ಸಹಿ ಮಾಡಿರುತ್ತಾರೆ, ನಂತರ ಅಶೋಕ ಸಹಿ ಮಾಡಿರುತ್ತಾರೆ, ನಂತರ ಆನಂದ ಸಹಿ ಮಾಡಿರುತ್ತಾರೆ, ನಂತರ ವಿಜಯ ಸಹಿ ಮಾಡಿರುತ್ತಾರೆ, ನಂತರ ಸಂಜಯ ಸಹಿ ಮಾಡಿರುತ್ತಾರೆ. ಒಟ್ಟಾಗಿ ಎಷ್ಟು ಸಹಿ ಇದೆ ಮತ್ತು ಯಾರು ಯಾರು ಯಾವ ಭಾಷೆಯಲ್ಲಿ ಸಹಿ ಮಾಡಿದ್ದಾರೆ ಎಂದು ಹೇಳಲು ಆಗುವುದಿಲ್ಲ.

ಸರ್ವೆ ನಂ.193/2 ಸುವರ್ಣ ಸೌಧವನ್ನು ಹತ್ತಿಕೊಂಡು ಇದೆ ಎಂದರೆ ಸರಿಯಲ್ಲ. ಸ್ವಲ್ಪ ದೂರದಲ್ಲಿ ಇದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಬೆಳಗಾವಿ ಹದ್ದು ಮುಗಿದ ನಂತರ ಅಲಾರವಾಡ ಹದ್ದು ಶುರುವಾಗುತ್ತದೆ ಎಂದರೆ ಸರಿ. ಅಲಾರವಾಡ ಹದ್ದು ಮುಗಿದ ನಂತರ ಸುವರ್ಣ ಸೌಧ ಪ್ರಾರಂಭವಾಗುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.193/2

ಪ್ಲಾಟ ಮಾಡುವಂತ ಜಮೀನು ಎಂದರೆ ಸರಿಯಲ್ಲ, ಕೃಷಿ ಜಮೀನು ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

ಸರ್ವೆ ನಂ.193/2 ರ ಬಗ್ಗೆ ಮೊದಲು ಏನು ವ್ಯವಹಾರ ಆಗಿತ್ತು ಎಂದರೆ ಅವರು ಹಣ ಪಡೆದುಕೊಂಡಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಹಣ ಪಡೆದ ದಿನಾಂಕ ಗೊತ್ತಿಲ್ಲ. ಎಷ್ಟು ಹಣ ಪಡೆದಿದ್ದರು ಎಂದರೆ ಗೊತ್ತಿಲ್ಲ. ಸಂಪೂರ್ಣವಾಗಿ ರೂ.74,250/- ಹಣವನ್ನು ಪಡೆದುಕೊಂಡಿದ್ದರು ಎಂದು ಸಾಕ್ಷಿ ನುಡಿಯತ್ತಾರೆ. ಅಡ್ವಾನ್ಸ ಹಣ ಪಡೆದ ನಂತರ ಎಷ್ಟು ಕರಾರುಗಳು ಆಗಿವೆ ಎಂದರೆ ಗೊತ್ತಿಲ್ಲ. ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪ್ರತಿವಾದಿ ಮತ್ತು ಕಿಶನ್ ಇವರು ಯಾವುದೇ ಕರಾರು ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**C/c 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**